ಅ) ಧಾರವಾಡ ಜಿಲ್ಲಾ ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿ ಇದುವರೆಗೆ ಎಷ್ಟು ಬಾರಿ ಸಭೆ ನಡೆಸಿದ,

ಆ) ಇದುವರೆಗೆ ನಡೆಸದಿದ್ದಲ್ಲಿ ವೇಳೆಗೆ ಸರಿಯಾಗಿ ಈ ಕೂಡಲೇ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇದೆ.

ಆ) ಅವಶ್ಯಕತೆಗನುಗುಣವಾಗಿ ಸಭೆ ಸೇರಬಹುದು.

ಇ) ಒಂದು ಭಾರಿ. (ದಿನಾಂಕ : 7-3-96ರಂದು)

ಈ) ಉದ್ಭವಿಸುವುದಿಲ್ಲ.

ವಿದ್ಯುಚ್ಛಕ್ತಿ ಮಂಡಲಿಯ ಲೈನ್‌ಮೆನ್ ಕೊರತೆ.

624 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಲೈನ್ ಮನ್‌ಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಕೊರತೆಯ ಸಂಖ್ಯೆ ಎಷ್ಟು.

ಇ) 1980ರಲ್ಲಿ ವಿವಿಧ ರೀತಿಯ ಗ್ರಾಹಕರ ಸಂಖ್ಯೆ ಎಷ್ಟು, ರ ಲೈನ್ ಮನ್‌ಗಳ ಸಂಖ್ಯೆ ಎಷ್ಟು.

ಈ) 1995ರ ಕೊನೆಗೆ ಇದ್ದ ವಿವಿಧ ರೀತಿಯ ಗ್ರಾಹಕರ ಸಂಖ್ಯೆ ಎಷ್ಟು ಲೈನ್ ಮನ್ ಗಳ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) 4924.

ಇ) ವಿವಿಧ ರೀತಿಯ ಗ್ರಾಹಕರ ಸಂಖ್ಯೆ 23.03 ಲಕ್ಷ ಲೈನ್ ಮನ್‌ಗಳ ಸಂಖ್ಯೆ: 5969

ಈ) ವಿವಿಧ ರೀತಿಯ ಗ್ರಾಹಕರ ಸಂಖ್ಯೆ 79.93.ಲಕ್ಷ ಲೈನ್ ಮನ್‌ಗಳ ಸಂಖ್ಯೆ: 13,876

ಧಾರವಾಡ ಕ್ಷೇತ್ರದ ರಸ್ತೆಗಳಿಗೆ ಹಣ ಬಿಡುಗಡೆ.

626 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?